**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬ್ಯಾಡಗಿ.**

**ಸಿ.ಸಿ. ನಂ. 348/2022.**

**ಸಿ ಡಬ್ಲ್ಯೂಃ 7**

**ಪಿ ಡಬ್ಲ್ಯೂಃ 2**

**ದಿನಾಂಕಃ 13-02-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ರಿಂದ 8 ನೇ ಆರೋಪಿತರ ಪರ ಶ್ರೀ ವಿ.ಎಂ.ಎನ್. ವಕೀಲರಿಂದಃ**

ನಮಗೆ ಓದಲು ಬರೆಯಲು ಬರುವುದಿಲ್ಲ. ಚಾಸಾ-1 ನನ್ನ ಅಣ್ಣನ ಮಗ. ಚಾಸಾ-2 ನನ್ನ ಸಂಬಂಧಿ. ಚಾಸಾ-6 ನನ್ನ ಅಣ್ಣ. ಚಾಸಾ-8 ಬೇರೆ ಊರಿನವರು ಇರುತ್ತಾರೆ. ಚಾಸಾ-9 ಬಾಜು ಹೊಲದವರು. ಚಾಸಾ-10 ನಮ್ಮ ಅಣ್ಣನ ಮಗ. ದಿನಾಂಕಃ 26.08.2022 ರಂದು ಹೇಳಿಕೆ ಕೊಟ್ಟಿರುತ್ತಾರೆ. ಸದರಿ ಹೇಳಿಕೆಯನ್ನು ಜಿಲ್ಲಾ ಆಸ್ಪತ್ರೆ ಹಾವೇರಿಯಲ್ಲಿ ನೀಡಿರುತ್ತೇನೆ. ನಮ್ಮ ಮತ್ತು ಆರೋಪಿತರ ಮದ್ಯೆ ಜಮೀನು ಕುರಿತು ಸಿವಿಲ್ ವ್ಯಾಜ್ಯ ಸರಿ ಇಲ್ಲ ಎಂದರೆ ಸರಿ. ಅಂದಾಜು 10 ವರ್ಷಗಳಿಂದ ಸಂಬಂಧ ಸರಿ ಇರುವುದಿಲ್ಲ. ಸರ್ವೆ ನಂ.40/2 ಈ ಜಮೀನಿನ ಕುರಿತು ಜಗಳ ಇರುತ್ತದೆ. ನಮ್ಮ ಅಣ್ಣ ಹೇಮನಗೌಡ ಆರೋಪಿತರ ಮೇಲೆ ಈ ಆಸ್ತಿ ಕುರಿತು ಸಿವಿಲ್ ದಾವೆ ಮಾಡಿದ್ದಾರೆ ಎಂದರೆ ಸರಿ. ನಾನು ಈ ಸರ್ವೆ ನಂಬರಿನ ಉತಾರನ್ನು ನೋಡಿರುವುದಿಲ್ಲ. ಆರೋಪಿ ನಂ.9 ರಿಂದ 11 ರವರ ಹಿರಿಯರ ಆಸ್ತಿ ಇದ್ದು ಅವರಿಗೆ ಹಿರೇಕೆರೂರು ತಾಲೂಕಿನ ತಡಕನಳ್ಳಿ ಗ್ರಾಮದಿಂದ ಬಂದುಉಳುಮೆ ಮಾಡಲು ಆಗದಿದ್ದರಿಂದ 1 ರಿಂದ 8 ನೇ ಆರೋಪಿತರಿಗೆ ಉಳುಮೆ ಮಾಡಲು ಬಿಟ್ಟುಕೊಟ್ಟಿದ್ದರು ಎಂದರೆ ಸರಿಯಲ್ಲ. ಇವತ್ತಿನವರೆಗೆ 1 ರಿಂದ 8 ನೇ ಆರೊಪಿತರು ಸದರಿ ಜಮೀನು ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. 26.08.2021 ರಂದು 1 ಮತ್ತು 3 ನೇ ಆರೋಪಿತರು ನನಗೂ ಮತ್ತು ನನ್ನ ಅಣ್ಣನಿಗೆ

ದಾವೆ ಚಾಲ್ತಿಯಲ್ಲಿದೆ ಜಮೀನಿನಲ್ಲಿ ಯಾಕೆ ಉಳುಮೆ ಮಾಡುತ್ತಿದ್ದಿರಾ ಅಂತಾ ಕೇಳಿದಾಗ ನಾನು ಮತ್ತು ನನ್ನ ಅಣ್ಣತಮ್ಮಂದಿರು ಸೇರಿ 1 ಮತ್ತು 3 ನೇ ಆರೋಪಿತರಿಗೆ ಹಲ್ಲೇ ಮಾಡಿ ಗಲಾಟೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆ ಕಾರಣಕ್ಕೆ ಆರೋಪಿತರು ನನ್ನ ಮೇಲೆ ನನ್ನ ಅಣ್ಣ ತಮ್ಮಂದಿರ ಮೇಲೆ ದೂರು ಸಲ್ಲಿಸಿದ್ದರು ಎಂದರೆ ಸರಿ. ಅದು ಇದೆ ನ್ಯಾಯಾಲಯದಲ್ಲಿ ಸಿ.ಸಿ ನಂ.05/2022 ಎಂದು ದಾಖಲಾಗಿದೆ ಎಂದರೆ ಸರಿ. ಆ ದಿನ ಜಿಲ್ಲಾ ಆಸ್ಪತ್ರೆಯಿಂದ ನನ್ನ ಅಣ್ಣ ಹೇಮನಗೌಡ ದೂರು ಸಲ್ಲಿಸಿರುತ್ತಾರೆ. ಆ ಕೇಸ್ ಏನಾಗಿದೆ ಅಂತಾ ನನಗೆ ಗೊತ್ತಿಲ್ಲ. ನನ್ನ ಅಣ್ಣ ಆರೋಪಿತರ ವಿರುದ್ಧ ಜಿಲ್ಲಾ ಆಸ್ಪತ್ರೆಯಿಂದ ದೂರು ಸಲ್ಲಿಸಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಶಾಲಿಗುಡಿ ಓಣಿಯಲ್ಲಿ ವಾಸ ಮಾಡುತ್ತೇನೆ. ಹೇಮನಗೌಡ ಇತನು ಹಟ್ಟಿಹಬ್ಬ ಓಣಿಯಲ್ಲಿ ವಾಸ ಮಾಡುತ್ತಾರೆ. ಆರೋಪಿತರ 2 ಮನೆಗಳು ನಮ್ಮ ಓಣಿಯಲ್ಲಿವೆ ಇನ್ನೂ 2 ಮನೆ ಬೇರೆ ಓಣಿಯಲ್ಲಿವೆ. ನಮ್ಮ ಮತ್ತು ಆರೋಪಿತರ ಮನೆ ಬಹಳ ದೂರ ಇರುವುದಿಲ್ಲ. ಅಂದಾಜು 200 ಮೀ ಅಂತರ ಇರಬಹುದು.

02. ನನ್ನ ಅಣ್ಣನಿಗೆ ಯಾವುದೇ ಗಾಯಗಳಾಗಿರುವುದಿಲ್ಲ. ದಿನಾಂಕಃ 29.08.2021 ರಂದ ಬೆಳಿಗ್ಗೆ 06.30 ರ ಸಮಾರಿಗೆ ಆರೋಪಿತರು ಬಂದು ನನ್ನ ಅಣ್ಣ ಹೇಮನಗೌಡನಿಗೆ ಹೊಡೆದು ಹಲ್ಲೇ ಮಾಡಿದ್ದಾರೆ ಎಂದು ಸುಳ್ಳು ಸಾಕ್ಷ್ಯ ಹೇಳಿದ್ದೇನೆ ಎಂದರೆ ಸರಿಯಲ್ಲ. ದಿನಾಂಕಃ 29.08.2021 ರಂದು ಮದ್ಯ ರಾತ್ರಿ 01.00 ಗಂಟೆ ಹೃದಯಾಘಾತದಿಂದ ಮರಣ ಹೊಂದಿದ್ದಾರೆ ಎಂದರೆ ಸರಿಯಲ್ಲ. ದಿನಾಂಕಃ 26.08.2021 ರಂದು ನಾವು ಜಮೀನಿಗೆ ಹೋದಾಗ ಆರೋಪಿತರು ಚಾಸಾ-1 ಮತ್ತು ಹೇಮನಗೌಡನಿಗೆ ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿಯಲ್ಲ. ಬಿಡಿಸಲು ಹೋದ ನಮಗೆ 3 ಮತ್ತು 7 ನೇ ಆರೋಪಿತರು ಕೈಯಿಂದ ಹೊಡೆದರು ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿ ಎಲ್ಲ ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ. ನನಗೆ ಕೈಯಿಂದ ಹೊಡೆದಿದ್ದಕ್ಕೆ ಗಾಯಗಳಾಗಿವೆ ಎಂದರೆ ಸರಿಯಲ್ಲ. ನಮ್ಮ ಅಣ್ಣ ಫೋನ್ ಮಾಡಿದ ನಂಬರ ನನಗೆ ಹೇಳಲು ಬರುವುದಿಲ್ಲ.

ದಿನಾಂಕಃ29.08.2021 ರಂದು ಯಾವುದೇ ಘಟನೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. 26.08.2021 ಕ್ಕೆ ಆರೋಪಿತರು ನಮ್ಮ ಮೇಲೆ ಸಲ್ಲಿಸಿದ ಕೇಸಿಗೆ ಈ ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

**ಪಾಟೀ ಸವಾಲು 9 ರಿಂದ 11 ನೇ ಆರೋಪಿತರ ಪರ ಶ್ರೀ ಆರ್.ಬಿ.ಪಿ. ವಕೀಲರಿಂದಃ**

ದಿನಾಂಕಃ 26.08.2021 ಮತ್ತು 29.08.2021 ರಂದು 9 ರಿಂದ 11 ನೇ ಆರೋಪಿತರು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿ. 29.08.2021 ರಂದು ಹೇಮನಗೌಡ ಹೃದಯಘಾತದಿಂದ ಮರಣ ಹೊಂದಿದ ತಕ್ಷಣ ಸಿವಿಲ್ ವ್ಯಾಜ್ಯ ಇದ್ದಿದ್ದರಿಂದ ಆಸ್ತಿ ಕಬಳಿಸುವ ಉದ್ದೇಶದಿಂದ ಈ ಸುಳ್ಳು ದೂರು ದಾಖಲಿಸಲಾಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೆ.ಸರಿ ಇದೆ.

ಸಹಿ/-

ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ ಬ್ಯಾಡಗಿ.